ಮೈಸೂರ ಗೆಜೆಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 22, ಸ್ 1890.

ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗೆವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.
ಫಾರೆಸ್ಟ್ ಇಲಾಖಾ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟ್ ಡೆಪುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಹಿರಿಕಾರಿಪುರದ ಕೋಠಿ—	14ನೇ ನವಂಬರ್ 1890		ಹೆಚ್ಚು ಕಡಮೆ 250 ಟ್ನಗಳು.
ಶಿವಮೊಗ್ಗಾ ..	ಡಿಟೋ— 17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ— 22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು	ಡಿಟೋ— 28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟ್ ಹಾಸನ	ಡಿಟೋ— 4ನೇ	ಡಿಸಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣ	ಡಿಟೋ— 10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ— 15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟ್	ಡಿಟೋ— 20ನೇ	ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮಕ್ಕುಂಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ವೋದಪ್ಪಡುವವು.

ಎಲ್. ರಿಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ನಂದೀದುರ್ಗ ಡಿವಿಜ್ಞ್ ಡಿಸ್ಟ್ರಿಕ್ಟ್ ಜಡ್ಜ್ಯರವರ ಕೋರ್ಟ್‌ನಿಂದಾ.

1890ನೇ ಇಸವಿ ಮಿಸಲೇನಿಯಸ್ ನಂಬರ್ 119.

ಅರ್ಜೀದಾರು.	ಎದುರು ಅರ್ಜೀದಾರು.
ಬೆಂಗಳೂರು ವ್ಯಾಪಾರಾಭಿವೃದ್ಧಿ ಕಂಪನಿ ಲಿಮಿಟೆಡ್ ಕ್ರಿಡಿಟರುಗಳು ಮತ್ತು ಷೇರುದಾರುಗಳಾದ 1ನೇ ನಂಜಂಣ ವಗ್ಯೆರೆ 9 ಜನ.	ಸದರೀ ಕಂಪನಿ ಏಜಂಟ್ ಮತ್ತು ಡೈರೆಕ್ಟರುಗಳಾದ 1ನೇ ರಾಮಚಂದ್ರರಾವ್ ವಗ್ಯೆರೆ 4 ಜನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡ ಅರ್ಜೀದಾರು ಬೆಂಗಳೂರು ವ್ಯಾಪಾರಾಭಿವೃದ್ಧಿ ಕಂಪನಿ ಲಿಮಿಟೆಡ್ ಸ್ 1866ನೇ ಇಸವಿ ಕಂಪನಿ ಆಕ್ಟು ಮೇರಿಗೆ ಸ್ 1875ನೇ ಇಸವಿಯಲ್ಲಿ ರಿಜಿಸ್ಟರಾಗಿ ಕಳದ 7 ತಿಂಗಳ ವರವಿಗೂ ನಡಿಯುತ್ತಾ ಬಂದು ಈಚಿಗೆ ಕೊಟ್ಟ ಸಾಲಗಳು ವಾಪಸ್

ಬಾರದೆ ಹೋದ್ದರಿಂದ ಕಂಪನಿ ನಷ್ಟ ಹೊಂದಿರುತ್ತೆ. ಕಂಪನಿಯಿಂದ ಕೆಲವು ಡಿಪಾಜಿಟ್‌ದಾರ್ರುಗ ಗೆ 7,000 ರೂಪಾಯಿಗಳ ವರವಿಗೂ ಬರ್ ೀಕಾಗಿದ್ದದ್ದರಿಂದ ಅವರುಗಳಲ್ಲಿ ಕೆಲವರು ಡಿಕ್ರಿಗಳನ್ನು ಪಡದು ಕಂಪನಿಯಲ್ಲಿದ್ದ ಬಟ್ಟೆಗಳನ್ನು ಮಾರಿ ಜಪ್ತೀ ಮಾಡಿಸಿ ಹಣ ಪಡದು ಯಿರುತ್ತಾರೆ. ಕಂಪನಿಗೆ ಡಿಪಾಜಿಟ್‌ದಾರ್ರುಗಳಿಗೂ ಕ್ರೆಡಿಟರುಗಳಿಗೂ ಹಣ ಕೊಡುವದಕ್ಕೆ ಚೈತನ್ಯನಿಲ್ಲದೆ ಯಿರುವದ್ದರಿಂದ ಸದರೀ ಕಂಪನಿಯನ್ನು ವೈಂಡಪ್ ಮಾಡಿಸಿ ಲಿಕ್ವಿಡೇಟರನ್ನು ನೇಮಿಸಬೇಕೆಂದು ಅರ್ಜೀಕೊಟ್ಟಿರುತ್ತಾರಾದ್ದರಿಂದ ಇದರ ಇತ್ಯರ್ಥದ ಬಗ್ಯೆ ಸ್ರ 1890ನೇ ಇಸವಿ ನವೆಂಬರ್ 24ನೇ ತಾರೀಖು ಮೊಕರರ್ ಮಾಡಿರುವದ್ದರಿಂದ ಇದಕ್ಕೆ ತಕರಾರುದಾರ್ರುಗಳೆಲ್ಲರೂ ತಾವೇ ಆಗಲಿ ತಮ್ಮ ಕಡೆ ಅಡ್ವೊಕೇಟರುಗಳೇ ಆಗಲಿ ಮೇಲ್ಕಂಡ ತಾರೀಖು ದಿವಿ 11 ಘಂಟೆಗೆ ಬೆಂಗಳೂರು ಮೊಕ್ತಾಂನಲ್ಲಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದು.

ತಾರೀಖು 7—11—90.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಬೆಂಗಳೂರು ಸಬ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದಲ್ಲಿರತಕ್ಕ 1ನೇ ಪಟ್ಟ ನರಸಮ್ಮ 2ನೇ ಯಿವಳ ಮಗ ರಂಗನ ವಿಷಯದಲ್ಲಿ—

ಸ್ರ 1890ನೇ ಇಸವಿ ದಿವಾಳೀ ಕೇಸ್ ನಂಬರ್ 121.

ಹುಕ್ಕುಂ

ಮೇಲ್ಕಂಡ 1ನೇ ನರಸಮ್ಮ 2ನೇ ರಂಗ ಸಹ ದಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್ ರಾದ ಮೆಸ್ಟರ್ ಎಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರಳಾದ 1ನೇ ನರಸಮ್ಮ 2ನೇ ರಂಗನ ಪರವಾಗಿ ಅಡ್ವೊಕೇಟ್ ಮೆಸ್ಟರ್ ಯಸ್. ರಾಮಸ್ವಾಮಯ್ಯಂಗಾರ್ರಿಗೆ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—ಲೇಣೇದಾರ ಹಾಜರಾಗಲಿಲ್ಲ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ 1ನೇ ನರಸಮ್ಮ 2ನೇ ರಂಗ ಸಹ ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವರನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಕ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನ ನಿರ್ಖಾಲಸ್ ಮಾಡಲಾಗಿರುತ್ತೆ ಯಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಜುಲೈ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಹುಟ್ಟಿದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಚಿಕ್ಕಬಳ್ಳಾಪುರದಲ್ಲಿರುವ ವಕ್ತಾಕಲ ಪಾಪೈಯ್ಯ.	56 0 0	1885	ಚಿಕ್ಕಬಳ್ಳಾಪುರ ಮುನಸಿಫ್ ಕೋರ್ಟು 1885ನೇ ಇಸವಿ ಅರಜಿನಲ್ 551ನೇ ನಂಬರ್ ಡಿಕ್ರೀ ಮೊಬಲಗು	

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾಲ್ಲೂಕು ಯಶವಂಚಪುರದ ಹೋಬಳಿ ಸರ್ವಮಾನ್ಯ ಭೂಪಸಂದ್ರದಲ್ಲಿ ಯಿರತಕ್ಕ ಸೈಯ್ಯದ್‌ರಜಾನ ವಿಷಯದಲ್ಲಿ—

ಸ್ರ 1890ನೇ ಇಸವಿ ದಿವಾಳೀ ಕೇಸ್ ನಂಬರ್ 425.

ಹುಕ್ಕುಂ

ಮೇಲ್ಕಂಡ ಸೈಯ್ಯದ್‌ರಜಾನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್‌ಜಡ್ಜ್‌ರಾದ ಮೆಸ್ಟರ್ ಯಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಸೈಯ್ಯದ್‌ರಜಾನ ಪರವಾಗಿ ಮೆಸ್ಟರ್ ಅಡ್ವೊಕೇಟ್ ಭೀಮರಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1— 2ನೇ ಯವರನ್ನ ಖುದ್ದಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—